# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22 ನೇ ಸಾಲಿನಿಂದ ಆಯವ್ಯಯ ಭಾಷಣ ಕಂಡಿಕೆ 71 ರಂತೆ ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋ.ಲೀಟರ್ ಡಿಸೇಲ್ ಮೇಲಿನ ಮಾರಾಟ ಕರ ಮರುಪಾವತಿಯ ಬದಲು ಡೀಸೆಲ್ ಡೆಲಿವರಿ ಪಾಯಿಂಟ್ ನಲ್ಲಿಯೇ ಕರರಹಿತ ದರದಲ್ಲಿ ಡೀಸೆಲ್ ವಿತರಣೆಗೆ ಕ್ರಮದ ಕುರಿತಂತೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: DoF-Techo-FYP1/28/2021, ದಿನಾಂಕ: 05-04-2021.

******

**ಪ್ರಸ್ತಾವನೆ:**

ರಾಜ್ಯ ಸರ್ಕಾರವು 2021-22ನೇ ಸಾಲಿನಲ್ಲಿ ಆಯವ್ಯಯ ಭಾಷಣದ ಕಂಡಿಕೆ- 71 ರಲ್ಲಿ "ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋಲೀಟರ್ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸಲು ಯೋಜನೆಯನ್ನು ತರಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಕರ್ನಾಟಕ ರಾಜ್ಯವು ಮೂರು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನು ಮತ್ತು 27,000 ಚದರ.ಕಿ.ಮೀ. ಖಂಡಾವರಣ ಪ್ರದೇಶವನ್ನೂ (continental shelf) ಹೊಂದಿದೆ. ಮೀನುಗಾರಿಕೆಯು ಕರಾವಳಿ ಕರ್ನಾಟಕದ ಪ್ರಾಚೀನ ಕಸುಬಾಗಿದ್ದು, ಕಾಲಕ್ರಮೇಣ ಸಾಂಪ್ರದಾಯಿಕ ಜೀವನಾಧಾರದಿಂದ ಬಹುಕೋಟಿ ಉದ್ದಿಮೆಯಾಗಿ ಬೆಳೆದು ನಿಂತಿದೆ.

ಆಧುನಿಕ ಮೀನುಗಾರಿಕೆ ವಿಧಾನಗಳು ರಾಜ್ಯದಲ್ಲಿ ಮೀನುಗಾರಿಕೆ ದೋಣಿಗಳ ಯಾಂತ್ರೀಕರಣದಿಂದ ಪ್ರಾರಂಭವಾಗಿದ್ದು, ಹೆಚ್ಚಿನ ಮೀನು ಉತ್ಪಾದನೆಯು ಯಾಂತ್ರೀಕೃತ ದೋಣಿಗಳಿಂದ ಬಂದಿರುತ್ತದೆ. ಕಡಲ ಮೀನುಗಾರಿಕೆಯ ಕಾರ್ಯಾಚರಣೆಯಲ್ಲಿ 4744 ಯಾಂತ್ರೀಕೃತ ದೋಣಿಗಳು, 10084 ಮೋಟರೀಕೃತ ದೋಣಿಗಳು ಮತ್ತು 9251 ನಾಡದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಂದ ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85 ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯಲಾಗುತ್ತಿದೆ. ಯಾಂತ್ರೀಕೃತ ಮೀನುಗಾರಿಕೆಯಲ್ಲಿ ಡೀಸೆಲ್ ಮೇಲಿನ ವೆಚ್ಚವು ಅತಿಮುಖ್ಯ ವೆಚ್ಚವಾಗಿರುತ್ತದೆ. ಡೀಸೆಲ್ ಬೆಲೆಯ ಹೆಚ್ಚಳದಿಂದಾಗಿ ಯಾಂತ್ರೀಕೃತ ಮೀನುಗಾರಿಕೆಯು ಲಾಭದಾಯಕವಾಗದಿರುವ ಪರಿಣಾಮ ಯಾಂತ್ರಿಕ ಮೀನುಗಾರಿಕೆಗೆ ಬಳಸುವ ಡೀಸೆಲ್ ಮೇಲಿನ ಮಾರಾಟಕರವನ್ನು ಪೂರ್ಣವಾಗಿ ವಿನಾಯಿತಿಗೊಳಿಸಿದ ಡೀಸೆಲ್‌ನ್ನು ವಿತರಿಸಲು ಮೀನುಗಾರರು ಕೋರಿರುವುದಾಗಿ ತಿಳಿಸಿರುತ್ತಾರೆ.

ಈ ಹಿಂದೆ "ಮೀನುಗಾರಿಕಾ ದೋಣಿಗಳಿಗೆ ರಾಜ್ಯ ಮಾರಾಟ ಕರರಹಿತ ಡೀಸೆಲ್ ವಿತರಣೆ" ಯೋಜನೆಯಡಿ ಮೀನುಗಾರರಿಗೆ ಕರ ರಹಿತ ಡೀಸೆಲ್‌ನ್ನು ವಿತರಣೆ ಮಾಡಲಾಗುತ್ತಿತ್ತು. 2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 79ರಲ್ಲಿ ಘೋಷಣೆಯಾದಂತೆ **ಪಸಂಮೀ 68 ಮೀಇಯೋ 2015 (ಭಾಗ-2), ದಿನಾಂಕ: 04-08-2015 ಮತ್ತು 05-09-2020 ರಲ್ಲಿ** 2015-16 ನೇ ಸಾಲಿನಿಂದ ಸದರಿ ಯೋಜನೆಯನ್ನು ಮಾರ್ಪಡಿಸಿ "ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮರುಪಾವತಿ" ಯೋಜನೆಯನ್ನು ಜಾರಿಗೆ ತರಲಾಯಿತು. "ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟಕರ ಮರುಪಾವತಿ" ಯೋಜನೆಯಡಿ ಪ್ರಸ್ತುತ ವಾರ್ಷಿಕ 1.50ಲಕ್ಷ ಕಿಲೋ ಲೀಟರ್ ಡೀಸೆಲ್ ಮೇಲಿನ ಮಾರಾಟ ಕರವನ್ನು ಮರು ಪಾವತಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ NIC ರವರಿಂದ ತಂತ್ರಾಂಶ ಅಭಿವೃದ್ಧಿ ಪಡಿಸಿ ರಾಜ್ಯ ಮಾರಾಟ ತೆರಿಗೆ ಸಮಾನವಾದ ಮೊತ್ತವನ್ನು ದೋಣಿ ಮಾಲೀಕರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಪಾವತಿಸಲಾಗುತ್ತಿದೆ. ದೋಣಿಗಳ ಇಂಜಿನ್ ಅಶ್ವಶಕ್ತಿಗನುಗುಣವಾಗಿ ಪ್ರತಿ ದೋಣಿಗೆ ಮಾಸಿಕ ಮಿತಿ ನಿಗದಿಪಡಿಸಿ ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮರುಪಾವತಿ ಮಾಡಲಾಗುತ್ತಿದೆ.

ಕಳೆದ ಕೆಲವು ವರ್ಷಗಳಿಂದ ಡೀಸೆಲ್ ಬೆಲೆ ಏರಿಕೆ, ಮೀನಿನ ಕೊರತೆ (ಮತ್ಸ್ಯ ಕ್ಷಾಮ), ಮೀನಿಗೆ ಯೋಗ್ಯ ಧಾರಣೆ ಸಿಗದೇ ಮೀನುಗಾರರು ನಷ್ಟವನ್ನು ಅನುಭವಿಸಿ ಸುಸ್ತಿದಾರರಾಗಿರುತ್ತಾರೆ. ಈಗಾಗಲೇ ಮೀನುಗಾರರು ರಾಜ್ಯ ಮಾರಾಟ ತೆರಿಗೆಯನ್ನು ಪಾವತಿ ಮಾಡಿ ಡೀಸೆಲ್ ಖರೀದಿಸಿ ಕೆಲವೊಮ್ಮೆ ಅವರಿಗೆ ಮರುಪಾವತಿ ವಿಳಂಬವಾಗುವುದರಿಂದ ಪೂರ್ಣ ಮೊತ್ತ ಪಾವತಿಸಿ ಡೀಸಲ್ ಖರೀದಿಸಲು ಮೀನುಗಾರರಿಗೆ ಸಾಕಷ್ಟು ತೊಂದರೆ ಆಗಿರುತ್ತದೆ. ಮೀನುಗಾರರ ಕೋರಿಕೆಯಂತೆ, 2021-22 ನೇ ಸಾಲಿನಿಂದ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ಡೀಸೆಲ್‌ನ್ನು ವಿತರಿಸಲು ಈಗ ಇರುವ ತಂತ್ರಾಂಶವನ್ನೇ ಬಳಸಿಕೊಂಡು ದೋಣಿಗಳ ಇಂಜಿನ್ ಅಶ್ವಶಕ್ತಿಗನುಗುಣವಾಗಿ ಪ್ರತಿ ದೋಣಿಗೆ ಮಾಸಿಕ ಮಿತಿಯೊಳಗೇ ನಿಗದಿತ ಡೀಸೆಲ್ ಬಂಕ್ ನವರು ಡೀಸೆಲ್ ಮುಖೇನ ವಿತರಿಸಲು ಪ್ರಸ್ತಾಪಿಸಿರುತ್ತಾರೆ.

ಈ ಎಲ್ಲಾ ಕಾರಣದಿಂದ ಮೀನುಗಾರಿಕಾ ದೋಣಿಗಳಿಗೆ ಮಾರಾಟ ತೆರಿಗೆ ರಹಿತ ಡೀಸೆಲ್‌ನ್ನು ಅನುಬಂಧದಲ್ಲಿನ ಷರತ್ತುಗಳೊಂದಿಗೆ ಮೀನುಗಾರರಿಗೆ ವಿತರಿಸಲು ಪ್ರಸ್ತಾಪಿಸುತ್ತಾ, ಸದರಿ ಎಲ್ಲಾ ಷರತ್ತು ಮತ್ತು ನಿಬಂಧನೆಗಳೊಂದಿಗೆ ಮೀನುಗಾರಿಕಾ ದೋಣಿಗಳಿಗೆ ಮಾರಾಟ ತೆರಿಗೆ ರಹಿತ ಡೀಸೆಲ್‌ನ್ನು ಹೆಚ್ಚು ಪಾರದರ್ಶಕ ವ್ಯವಸ್ಥೆಯಲ್ಲಿ ವಿತರಿಸುವುದರಿಂದ ಮೀನುಗಾರರು ಹಾಗೂ ಮೀನುಗಾರಿಕಾ ವಲಯವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋಲೀಟರ್ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸುವ ಉದ್ದೇಶದಿಂದ

2021-22ನೇ ಸಾಲಿನಲ್ಲಿ "ಯಾಂತ್ರೀಕೃತ ದೋಣಿಗಳಿಗೆ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸುವ ಯೋಜನೆ" ಎಂಬ ಪರಿಷ್ಕೃತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಆಗಸ್ಟ್ 2021ರಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-157 ಮೀಇಯೋ 2021, ಬೆಂಗಳೂರು**
**ದಿನಾಂಕ: 16-06-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಿಂದ ಆಯವ್ಯಯ ಭಾಷಣ ಕಂಡಿಕೆ-71 ರಂತೆ ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋ.ಲೀಟರ್ ಡಿಸೇಲ್ ಮೇಲಿನ ಮಾರಾಟ ಕರ ಮರುಪಾವತಿಯ ಬದಲು ಡಿಸೇಲ್ ಡೆಲಿವರಿ ಪಾಯಿಂಟ್ ನಲ್ಲಿಯೇ ಕರರಹಿತ ದರದಲ್ಲಿ ಡೀಸೆಲ್ ವಿತರಣೆ ಕಾರ್ಯಕ್ರಮವನ್ನು "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್-ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಡಿ ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಸದರಿ ಯೋಜನೆಗೆ ತಗಲುವ ವೆಚ್ಚವನ್ನು 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2405-00-103-0-23-100 ರಡಿ ಒದಗಿಸಲಾಗಿರುವ ರೂ.10300.00 ಲಕ್ಷಗಳ ಅನುದಾನದ ಮಿತಿಯೊಳಪಟ್ಟು ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಪಿಎಫ್‌ಓ /3/2021, ದಿನಾಂಕ: 17-04-2021 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/175/ವೆಚ್ಚ-4/2021 ದಿನಾಂಕ: 03-05-2021 ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

Kamakshi U.A
(ಕಾಮಾಕ್ಷಿ ಯು.ಎ.) 16/6/2021
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

**<u>ಆದೇಶ ಸಂಖ್ಯೆ: ಪಸಂಮೀ ಇ-157 ಮೀಇಯೋ 2021, ಬೆಂಗಳೂರು</u>**
**ದಿನಾಂಕ: 16-06-2021 ರ**

## ಅನುಬಂಧ
## <u>ಷರತ್ತು ಮತ್ತು ನಿಬಂಧನೆಗಳು</u>

1. ಪ್ರತಿ ದೋಣಿಯ ಡಿಸೇಲ್ ಟ್ಯಾಂಕಗೆ ವಿಶಿಷ್ಟ ಗುರುತಿನ ಟ್ಯಾಂಪರ್ ಪ್ರೂಫ್ ಸೆನ್ಸಾರ್ ಅಳವಡಿಸತಕ್ಕದ್ದು ಮತ್ತು ಡೀಸೆಲ್ ಬಂಕ್ ನ ನಾಜಲ್ ನ ಸೆನ್ಸಾರ್ ರೀಡರ್ ದೋಣಿಯ ಡಿಸೇಲ್ ಟ್ಯಾಂಕನ್ನು ಸೆನ್ಸಾರ್ ಗುರುತಿಸಿ ಆ ದೋಣಿಗೇ ಡೀಸೆಲ್ ವಿತರಿಸುವಂತೆ ವ್ಯವಸ್ಥೆ ಇರತಕ್ಕದ್ದು.

2. ಡೀಸೆಲ್ ವಿತರಣೆಯಲ್ಲಿ ನಿಖರತೆ ನಿರ್ವಹಿಸಲು ದೋಣಿಗಳಿಗೆ Vessel Tracking System Device ನ್ನು ಅಳವಡಿಸುವುದು. ಮತ್ತು ಇದರಿಂದ ದೋಣಿಗಳು ಮೀನುಗಾರಿಕೆಗೆ ತೆರಳಿರುವುದನ್ನು ಟ್ರ್ಯಾಕ್ ಮಾಡುವುದು ಮತ್ತು ಇಲಾಖೆಗೆ ಪ್ರತಿ ತಿಂಗಳ ದೋಣಿ ಚಲಿಸಿದ ದೂರ(Nautical Mile) ತಿಳಿಸತಕ್ಕದು ಹಾಗೂ ಹಿಂದಿನ ತಿಂಗಳ ದೋಣಿ ಚಲಿಸಿದ ದೂರ ತಿಳಿಸಿದ ನಂತರವೇ ಪ್ರತಿ ತಿಂಗಳು ಕರರಹಿತ ಡಿಸೇಲ್ ನ್ನು ಪೂರೈಸಲಾಗುವುದು.

3. ಡೀಸೆಲ್ ಬಂಕ್ ಗಳಿಗೆ ಕರರಹಿತ ಡೀಸೆಲ್‌ನ್ನು ಮೀನುಗಾರಿಕೆ ದೋಣಿಗಳಿಗೆ ನಿಗದಿತ ಕೋಟಾ ಮಾತ್ರ ನೀಡಲು ಅವಕಾಶವಿರುವಂತೆ FRIMS ತಂತ್ರಾಂಶವನ್ನು ಉನ್ನತೀಕರಿಸುವುದು. ಮತ್ತು ಆ ತಂತ್ರಾಂಶದಿಂದಲೇ ಡೀಸೆಲ್ ವಿತರಣೆ ಮಾಹಿತಿಯನ್ನು ನಿರ್ವಹಿಸತಕ್ಕದ್ದು. ಪ್ರತೀ ದೋಣಿಗೆ (FRIMS) ತಂತ್ರಾಂಶದಲ್ಲಿಯೇ ಮಾಸಿಕ ಕೋಟಾವನ್ನು ನಿಗದಿಪಡಿಸುವುದು ಮತ್ತು ನಿಗಾವಹಿಸುವುದು.

4. ಡೀಸೆಲ್ ಪಾಸ್ ಪುಸ್ತಕ ಮತ್ತು ಪರವಾನಗಿಯನ್ನು (FRIMS) ಪ್ರಿಂಟ್ ತಂತ್ರಾಂಶದಲ್ಲಿ ನೀಡುವುದನ್ನು ಮುಂದುವರಿಸುವುದು.

5. ದೋಣಿಗಳು ಬಂಕ್ ಬಳಿಯೇ ಬಂದು ದೋಣಿಗಳಿಗೆ ನಿಗದಿತ ಪ್ರಮಾಣದ ಡೀಸೆಲ್ ತುಂಬಿಸಿಕೊಳ್ಳುವುದು.

6. ಎಲ್ಲಾ ಬಂಕ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿರತಕ್ಕದ್ದು ಮತ್ತು ದೋಣಿಗಳ ಮಾಹಿತಿಯು ಸ್ಪಷ್ಟವಾಗಿ ದಾಖಲಾಗುವಂತೆ ಇರಿಸತಕ್ಕದ್ದು.

7. ದೋಣಿಗಳ GPS Device ಗಳಲ್ಲಿ Geo-fencing ವ್ಯವಸ್ಥೆ ಅಳವಡಿಸಬೇಕು.

8. ಕಾನೂನು ಉಲ್ಲಂಘನೆ ಮಾಡುವ ದೋಣಿಗಳ ಮಾಹಿತಿ FRIMS ತಂತ್ರಾಂಶದಲ್ಲಿ ದಾಖಲಾಗಿ ನಿರ್ಧಿಷ್ಟ ಅವಧಿಗೆ ಆ ದೋಣಿಗೆ ಡೀಸೆಲ್ ವಿತರಣೆಯನ್ನು ಸ್ಥಗಿತಗೊಳಿಸುವುದು.

9. ಡೀಸೆಲ್ ವಿತರಣೆಯಲ್ಲಿನ ಎಲ್ಲಾ ದಾಖಲೆಗಳ ನಿರ್ವಹಣೆಯು ಬಂಕಿನ ಸಿಬ್ಬಂದಿ ನಿರ್ವಹಿಸತಕ್ಕದ್ದು ಮತ್ತು ಯಾವುದೇ ರೀತಿಯ ಲೋಪದೋಷಗಳಾದಲ್ಲಿ ಅವರೇ ಜವಾಬ್ದಾರರು.

Kamakshi U.A 16/6/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)